**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ**

| | |
|---|---|
| ಓ ಎಸ್ ನಂ | 205/2017 |
| 2 ನೇ ಪ್ರತಿವಾದಿ | ಡಿ.ಡಬ್ಲ್ಯೂ-1 |
| ದಿನಾಂಕ | 13-08-2026 |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಆರ್ ವಾಯ್ ವಕೀಲರಿಂದಃ**

1) ನಾನು 5 ನೇ ತರಗತಿಯ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಮತ್ತು ಮರಾಠಿ ಓದಲು ಬರೆಯಲು ಬರುವುದಿಲ್ಲ. 1 ನೇ ಪ್ರತಿವಾದಿ ನನ್ನ ತಂದೆ. 3 ಮತ್ತು 4 ನೇ ಪ್ರತಿವಾದಿ ಅಣ್ಣಂದಿರು ಇರುತ್ತಾರೆ. 1 ರಿಂದ 4 ನೇ ಪ್ರತಿವಾದಿಗಳ ಮಧ್ಯೆ ಸಂಬಂಧ ಚನ್ನಾಗಿ ಇರುತ್ತದೆ ಎಂದರೆ ಸರಿ. ನಮ್ಮ ಅಜ್ಜನ ಹೆಸರು ಮಾಯಪ್ಪ ಸುಬ್ರಾವ ಕಾಂಬಳೆ. ವಾದಿಯ ಪರಿಚಯ ಇರುತ್ತದೆ. ವಾದಿಯು ಶ್ರೀಪತಿ ಕಾಂಬಳೆ ಇವರ ಮಗಳು ಎಂದರೆ ಸರಿ. ವಾದಿಯ ತಾಯಿ ತಾರಾಬಾಯಿ ಇವರು ಮಂಗಾವತಿಯಲ್ಲಿ ವಾಸಿಸುತ್ತಾರೆ ಎಂದರೆ ಸರಿ. ವಾದಿಗೆ ಶರದ ಎನ್ನುವ ತಮ್ಮ ಇರುತ್ತಾರೆ ಎಂದರೆ ಸರಿ. ಶರದನ ಮದುವೆ ವಿಮಲಾ ಎನ್ನುವವಳ ಜೊತೆ ಆಗಿರುತ್ತದೆ ಎಂದರೆ ಸರಿ. ವಿಮಲಾ ಇವಳು ಶರದಗೆ ಬಿಟ್ಟು ಕೊಲ್ಲಾಪೂರದಲ್ಲಿ ಬೇರೆ ಮದುವೆ ಮಾಡಿಕೊಂಡು ವಾಸ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಶರದ ತೀರಿಕೊಂಡಿರುತ್ತಾರೆ ಎಂದರೆ ಸರಿ.

2) ವಾದಿಯು ತನ್ನ ಗಂಡನ ಜಗಳ ಮಾಡಿಕೊಂಡು ಚಂದೂರಿನಲ್ಲಿ ತನ್ನ ತವರು ಮನೆಯಲ್ಲಿ ವಾಸಿಸುತ್ತಾರೆ ಎಂದರೆ ಸರಿ. ಶರದ ತೀರಿಕೊಂಡ ನಂತರ ತಾರಾಬಾಯಿ, ವಿಮಲಾ ಮತ್ತು ವಾದಿ ಮಧ್ಯೆ ಆಸ್ತಿಯ ಪಾಲು ಕುರಿತು ದಾವಾ ಸಲ್ಲಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಈಗ ಯಾವ ಹಂತದಲ್ಲಿ ಇರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ.

3) ಮನೆ ಸಂಖ್ಯೆ 910 ಕುರಿತು ಪ್ರಸ್ತುತ ದಾವೆ ಸಲ್ಲಿಸಲಾಗಿರುತ್ತದೆ ಎಂದು ನನಗೆ ಗೊತ್ತಿರುತ್ತದೆ. ದಾವಾ ಅನುಸೂಚಿ ಎ ಆಸ್ತಿ ವಾದಿಗೆ ಸೇರಿದ್ದು ಇರುತ್ತದೆ ಎಂದರೆ

ಸಾಕ್ಷಿಯು ಖುಲ್ಲಾ ಜಾಗೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಜ್ಜ ನಿಪಿ19 ಮತ್ತು ನಿಡಿ 1 ರಂತೆ 1951 ರಲ್ಲಿ ವಾದಿಯ ತಂದೆಗೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಖರೀದಿಯಾದ ನಂತರ ಸದರಿ ಆಸ್ತಿಗೆ ವಿಪಿಸಿ ನಂಬರ 910 ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ವಾದಿಯ ತಂದೆ ಶ್ರೀಪತಿ ತೀರಿಕೊಂಡ ನಂತರ ದಾವಾ ಆಸ್ತಿ ವಾದಿಯ ಹೆಸರಿನಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ. ನಿಪಿ19 ಖರೀದಿ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ನಮ್ಮ ಆಸ್ತಿ ಸಂಖ್ಯೆ ವಿಪಿಸಿ ನಂಬರ 911 ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿ. ಸದರಿ ವಿಪಿಸಿ ನಂಬರ 911 ರಲ್ಲಿ ಮನೆ ಮತ್ತು ಖುಲ್ಲಾ ಜಾಗೆ ಇರುತ್ತದೆ. ಅದರಲ್ಲಿ ಮನೆ L ಆಕಾರ ಹೊಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ವಾದಿಯ ಮನೆಯು ಸಹ L ಆಕಾರ ಹೊಂದಿರುತ್ತದೆ ಎಂದರೆ ಸರಿಯಲ್ಲ. ನಿಪಿ19 ರಂತೆ ವಿಪಿಸಿ ನಂಬರ 910 ರ ಉತ್ತರ ದಿಕ್ಕಿಗೆ ಸರಕಾರಿ ರಸ್ತೆ ಇರುತ್ತದೆ ಎಂದರೆ ಸರಿ. ನಿಪಿ19 ರಂತೆ ವಿಪಿಸಿ ನಂಬರ 910 ರಲ್ಲಿ ಎರಡು ಬೇರೆ ಬೇರೆ ಅಳತೆ ತೋರಿಸಲಾಗಿದೆ ಎಂದರೆ ಸರಿ. ಅದರ ಚಕಬಂದಿಯು ಒಂದೇ ಇರುತ್ತದೆ ಎಂದರೆ ಸರಿ. ದಕ್ಷಿಣ ಮತ್ತು ಪಶ್ಚಿಮ ದಿಕ್ಕಿಗೆ ನಮ್ಮ ಆಸ್ತಿ ಇರುತ್ತದೆ ಎಂದು ನಿಪಿ19 ರಲ್ಲಿ ಉಲ್ಲೇಖವಾಗಿರುತ್ತದೆ ಎಂದರೆ ಸರಿ.

4) 2013 ರಲ್ಲಿ ನಮ್ಮ ತಂದೆಯವರು ವಾದಿ ಮತ್ತು ಅವರ ಮಗ ಪ್ರಕಾಶ ವಿರುದ್ಧ ಮನಾಯಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯು ಕೆ ಡಿ ಕುರಣೆ ಮತ್ತು ಬಿ ಎಸ್ ವಡವಡೆ ಎನ್ನುವ ವಕೀಲರು ನಮ್ಮ ತಂದೆ ಪರವಾಗಿ ವಕಾಲತು ಸಲ್ಲಿಸಿದ್ದರು ಎಂದರೆ ಸರಿ. ಅದರ ವಾದ ಪತ್ರವನ್ನು ಈಗಾಗಲೇ ನಿಪಿ7 ಎಂದು ಗುರುತಿಸಲಾಗಿದೆ. ಆ ದಾವೆಯಲ್ಲಿ ವಾದಿ ಮತ್ತು ಅವರ ಮಗ ನಿಪಿ 8 ರಂತೆ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ. ನಿಪಿ 8 ರ ಜೊತೆ ಹಾತ ನಕಾಶೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆಯು ನಮ್ಮ ತಂದೆ ಹಿಂಪಡೆದುಕೊಂಡಿರುತ್ತಾರೆ. ನಿಪಿ9 ರಂತೆ ದಿಃ21.01.2015 ರಂದು ವಾದಿ ಮತ್ತು ಅವರ ಮಗ ನಮ್ಮ ಆಸ್ತಿಗೆ ಯಾವುದೆ ಹರಕತ ಮಾಡುತ್ತಿರುವುದಿಲ್ಲ ಎಂದು ನಾನು ದಾವೆಯು ಹಿಂಪಡೆದುಕೊಳ್ಳುತ್ತೇನೆ ಅಂತಾ ಮೆಮೊ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮೆಮೊಗೆ ವಾದಿ ಮತ್ತು ಅವರ ಮಗ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ. ನಂತರ ನಮ್ಮ ತಂದೆ ಆ ಮೊಮೊ ಹಿಂಪಡೆದುಕೊಂಡಿರುತ್ತಾರೆ ಎಂದರೆ

ಸರಿ. ದಿಃ31.01.2015 ರಂದು ನಮ್ಮ ತಂದೆ ನಿಪಿ10 ರಂತೆ ಆ ದಾವೆಯನ್ನು ಹಿಂಪಡೆದುಕೊಂಡಿರುತ್ತಾರೆ ಎಂದರೆ ಸರಿ.

5) ಅಸಲು ದಾವೆ ಸಂಖ್ಯೆ 269/2014 ರಂತೆ ನಾನು ನಮ್ಮ ತಂದೆ ಮತ್ತು ಸಹೋದರರ ವಿರುದ್ಧ ವಿ ಪಿ ಸಿ ನಂಬರ 911 ಕ್ಕೆ ಸಂಬಂಧಿಸಿದಂತೆ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಆ ದಾವೆಯು ಸಹ ಬಿ ಎಸ್ ವಡವಡೆ ವಕೀಲರಿಂದ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಆ ದಾವೆ ಸಲ್ಲಿಸುವಾಗ ನಮ್ಮ ತಂದೆ ಸಲ್ಲಿಸಿದ ಅಸಲು ದಾವೆ ಸಂಖ್ಯೆ 105/2013 ಚಾಲತಿಯಲ್ಲಿ ಇರುತ್ತದೆ ಎಂದು ನನಗೆ ಗೊತ್ತಿರುತ್ತದೆ. ಸದರಿ ದಾವೆ ಚಾಲತಿಯಲ್ಲಿ ಇರುವ ಬಗ್ಗೆ ನಾನು ಸಲ್ಲಿಸಿದ ಅಸಲು ದಾವೆ ಸಂಖ್ಯೆ 269/2014 ಇಲ್ಲಿ ನಮೂದು ಮಾಡಿರುತ್ತೇನೆ.

6) ಅಸಲು ದಾವೆ ಸಂಖ್ಯೆ 105/2013 ರಲ್ಲಿ ಪ್ರಸ್ತುತ ವಾದಿ ಮತ್ತು ಅವರ ಮಗ ದಾವಾ ಆಸ್ತಿ ಸಂಖ್ಯೆ 911 ರ ಮಾಲಿಕ ಮತ್ತು ಕಬಜಾ ಬಗ್ಗೆ ತಕರಾರು ಮಾಡಿದ್ದ ಬಗ್ಗೆ ನನಗೆ ಗೊತ್ತಿರುತ್ತದೆ. ಸದರಿ ದಾವೆ ಚಾಲತಿ ಇದ್ದಾಗ ನಾನು ಮತ್ತು ನನ್ನ ತಂದೆ ಹಾಗೂ ಸಹೋದರರು ಸಂಗನಮತ ಮಾಡಿಕೊಂಡು ದಾವೆ ಸಂಖ್ಯೆ 269/2014 ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ನಂತರ ಪೀರಜಾದೆ ವಕೀಲರು ನನ್ನ ಪರವಾಗಿ ವಕಾಲತ ಸಲ್ಲಿಸಿರುತ್ತಾರೆ ಎಂದರೆ ಸರಿ. ಆ ದಾವೆಯಲ್ಲಿ ನಮ್ಮ ತಂದೆ ಹಾಗೂ ಸಹೋದರರು ಬಿ ಡಿ ಕಾಂಬಳೆ ವಕೀಲರಿಗೆ ನೇಮಕ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆ ದಾವೆಯಲ್ಲಿ ನಮ್ಮ ತಂದೆ ಮತ್ತು ಸಹೋದರರಿಗೆ ಸಮನ್ಸ ಜಾರಿಯಾಗುವ ಪೂರ್ವದಲ್ಲಿ ನಿ ಪಿ 16 ರಂತೆ ಅರ್ಜಿ ಸಲ್ಲಿಸಿ ಅಪಸಾತ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ 105/2013 ಚಾಲತಿ ಇರುವ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಆದರೆ ಅದರ ಬಗ್ಗೆ ನಿಪಿ 16 ರಲ್ಲಿ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸರಿ. ಅಸಲು ದಾವೆ ಸಂಖ್ಯೆ 269/2014 ರಲ್ಲಿ ಬೇಬಿತಾಯಿ ಮತ್ತು ಅವರ ಮಗನಿಗೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಅಸಲು ದಾವೆ ಸಂಖ್ಯೆ 105/2013 ರಲ್ಲಿ ಬೇಬಿತಾಯಿ ರವರು ವಿಪಿಸಿ ನಂಬರ 911 ಕ್ಕೆ ಸಂಬಂಧಿಸಿದ ಮಾಲಿಕತ್ವದ ಬಗ್ಗೆ ತಕರಾರು ಸಲ್ಲಿಸಿದ್ದರಿಂದ ಅಸಲು ದಾವೆ ಸಂಖ್ಯೆ 269/2014 ಯಲ್ಲಿ ಅವರಿಗೆ ಪಕ್ಷಗಾರರನ್ನಾಗಿ ಮಾಡದೆ ದಾವೆ ಸಲ್ಲಿಸಿ ನಿಪಿ16 ರಂತೆ ಅಪಸಾತ ಅರ್ಜಿ ಸಲ್ಲಿಸಿ ದಾವೆಯು ಅಪಸಾತ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

7) ನಾನು, ನನ್ನ ತಂದೆ ಹಾಗೂ ಸಹೋದರರು ಜಂಟಿಯಾಗಿ ವಾಸ ಮಾಡುತ್ತೇವೆ ಎಂದರೆ ಸರಿ. ನಾವು ಎಲ್ಲರೂ ಜಂಟಿಯಾಗಿ ವಾಸ ಮಾಡುತ್ತಿದ್ದರೂ ಸಹ ಅಸಲು ದಾವೆ ಸಂಖ್ಯೆ 269/2014 ರಲ್ಲಿ ನಿ ಪಿ 16 ರಂತೆ ಸುಳ್ಳು ಅಪಸಾತ ಅರ್ಜಿ ಸಲ್ಲಿಸಿ ನಿಪಿ 17 ರಂತೆ ಸುಳ್ಳು ಡಿಕ್ರಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 17 ರ ಪ್ರಕಾರ ವಿಪಿ ಸಿ ನಂಬರ 911 ರಲ್ಲಿ ನಮ್ಮ ಹೆಸರು ಸೇರಿಸಲು ಪಂಚಾಯತಿಗೆ ವರದಿ ಸಲ್ಲಿಸಿರುತ್ತೇವೆ ಎಂದರೆ ಸರಿ. ನಮ್ಮ ಹೆಸರುಗಳು ಸೇರಿಸಿದ ನಂತರ ವಾದಿಯ ದಾವಾ ಆಸ್ತಿಗೆ ಹರಕತ ಮಾಡಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಕಾಲವಕಾಶ ಕೋರಿದ್ದು, ಆಲಿಸಿ, ನ್ಯಾಯಿಕ ಹಿತದೃಷ್ಟಿಯಿಂದ ಕಾಲವಕಾಶ ನೀಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ